<u>**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ.**</u>

O.S. No- 162/2023

PW-1

<u>ದಿನಾಂಕಃ 24.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಮುಂದುವರಿದ ಪಾಟಿ ಸವಾಲುಃ ಶ್ರೀ. ಪಿ.ಪಿ.ಎನ್. 1 ನೇ ಪ್ರತಿವಾದಿ ಪರ ವಕೀಲರಿಂದಃ** ದಾವ ಆಸ್ತಿ ಮೊದಲು ಹಳೆಯ ಮನೆ ಇತ್ತು ಎಂದರೆ ಸರಿ. 1 ನೇ ಪ್ರತಿವಾದಿ ಅದನ್ನು ಕೆಡವಿ ಅನುಮತಿ ಪಡೆದು ಮರಳಿ ಕಟ್ಟಿದ್ದಾರೆ ಎಂದರೆ ಸರಿ. ಮೊದಲು ಹಳೆಯ ಮನೆಯಲ್ಲಿ ಕಿಟಕಿ ಬಾಗಿಲು ಯಾವ ರೀತಿ ಇತ್ತೋ ಅದೇ ರೀತಿ ಹೊಸ ಮನೆಯಲ್ಲೂ ಕಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು ಹೆಚ್ಚು ಮುಂದುವರಿದು ಸಜ್ಜಾ ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ಅವರ ಹಳೆಯ ಮನೆಯಲ್ಲಿ ಸಜ್ಜಾ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಯರು ಅವರ ಜಾಗ ಮೀರಿ ಸಜ್ಜಾ ಕಟ್ಟಿದಾದರೆ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿಯರು ಮನೆಯ ಪಕ್ಕದಲ್ಲಿ ಇರುವ ಮಹಾವೀರ ಭಂಡಾರಿ ಇವರೂ ಸಹ ಇತ್ತೀಚೆಗೆ ಅಂಗಡಿ ಮತ್ತು ಮನೆಯನ್ನು ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ಸಾಕ್ಷಿಗೆ 3 ಫೋಟೋಳನ್ನು ತೋರಿಸಲಾಗಿ ಫೋಟೋದಲ್ಲಿರುವ ಕಟ್ಟಡ ಮಹಾವೀರ ಭಂಡಾರಿ ಇವರದು ಎಂದರೆ ಸರಿ. ಸದರಿ ಫೋಟೋಗಳನ್ನು ನಿಡಿ-1 ಮತ್ತು ನಿಡಿ-2 ಎಂದು ಗುರುತಿಸಲಾಯಿತು. (ಸದರಿ ಫೋಟೋಗಳನ್ನು ಭಾ.ಸಾ. ಅಧಿನಿಯಮ 63(4) ರಡಿಯಲ್ಲಿ ಪ್ರಮಾಣ ಪತ್ರ ನೀಡುವ ಷರತ್ತಿನ ಮೇರೆಗೆ ಗುರುತಿಸಲಾಯಿತು.) ಸಾಕ್ಷಿಗೆ ಮತ್ತೆರೆಡು ಫೋಟೋಗಳನ್ನು ತೋರಿಸಲಾಗಿ ಅದು ತಮ್ಮದೇ ಮನೆ ಎಂದು ಗುರತಿಸಿರುತ್ತಾರೆ. ಅವುಗಳನ್ನು ನಿಡಿ-3 ಮತ್ತು ನಿಡಿ-4 ಎಂದು ಗುರುತಿಸಲಾಯಿತು. (ಸದರಿ ಫೋಟೋಗಳನ್ನು ಭಾ.ಸಾ. ಅಧಿನಿಯಮ 63(4) ರಡಿಯಲ್ಲಿ ಪ್ರಮಾಣ ಪತ್ರ ನೀಡುವ ಷರತ್ತಿನ ಮೇರೆಗೆ ಗುರುತಿಸಲಾಯಿತು.) ನಿಡಿ-3 ಮತ್ತು ನಿಡಿ- 4 ರ ಫೋಟೋಗಳಲ್ಲಿ ತೋರಿಸಿದಂತೆ ಏಣಿ ಸಜ್ಜೆಯನ್ನು ರಸ್ತೆಗೆ ಕಟ್ಟಲಾಗಿದೆ ಎಂದರೆ ಸರಿಯಲ್ಲ. ಅದೇ ರೀತಿ ನಮ ಪಕ್ಕದ ಮನೆಯವರ ಮನೆಗೂ ಸಹ ಇದೇ ರೀತಿ ಸ್ಟೀಲಿನ ಏಣಿ ಸಜ್ಜೆ ಇದೆ ಎಂದರೆ ಸರಿ.

ಪ್ರತಿವಾದಿಯರು ಯಾವುದೇ ಜಾಗವನ್ನು ಅತಿಕ್ರಮಣ ಮಾಡಿ ಹೆಚ್ಚುವರಿ ಸಜ್ಜೆಯನ್ನು ಕಟ್ಟಿಲ್ಲ ಎಂದರೆ ಸರಿಯಲ್ಲ. ಮುನಿಸಿಪಾಲಿಟಿಯವರಿಂದ ಅನುಮತಿಯನ್ನು ಪಡೆದು ಅದರ ಪ್ರಕಾರ ಮನೆಯನ್ನು ಕಟ್ಟಿದ್ದಾರೆ ಎಂದರೆ ಸರಿ. ಬಸಪ್ಪ ಕಲ್ಲಪ್ಪ ಕೌಜಲಗಿ ಹಾಗೂ ಸುಭಾಷ ರಾಮನಗೌಡ ಪಾಟೀಲ ಇವರು ನನ್ನ ವಿರುದ್ಧ ದಾವೆ ದಾಖಲಿಸಿದದರುಎಂದರೆ ಸಾಕ್ಷಿ ಸದರಿ ದಾಖಲೆ ನಮ್ಮಂತೆ ಆಗಿದೆ ಎಂದು ನುಡಿಯುತ್ತಾರೆ. ನಾನು ಸಮಾಯಕ ದಾರಿಯಲ್ಲಿ ಹೆಚ್ಚುವರಿ ಸಜ್ಜೆ ಕಟ್ಟಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯ ಮೇಲೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್.ಎಸ್.ಎ. ನಂ. 100049/2017 ರ ದಾವೆ ಬಾಕಿಯಿದೆ ಎಂದರೆ

ನನಗೆ ಗೊತ್ತಿಲ್ಲ. ನನಗೆ ಗಾಳಿ ಬೆಳಕಿಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಪಶ್ಚಿಮಕ್ಕೆ ಸಮಾಯಕ ರಸ್ತೆ ಇದ್ದು ಅದು ಖುಲ್ಲಾ ಜಾಗೆ ಇದೆ ಎಂದರೆ ಅದು ಸ್ವಲ್ಪ ಇದ್ದು ಅಲ್ಲಿ ಮನೆಗಳು ಇವೆ.

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/-

ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.